UASB LIBRARY
Newspaper Clippings

Pg .1 Friday 05-02-2021 Jai Kisan



For more information visit
University Library Website
Web - uasbagrilibindia.org
E-mail- librarian@uasbangalore.edu.in

ಜಲಚರಗಳಿಗೆ ಮಾರಕ ಇಸ್ರೋ ಲೇಔಟ್ ದೇವರಕೆರೆ ಪಾರ್ಕ್ ಸಮೀಪದ ಕೆರೆಯಲ್ಲಿ ವಿದೇಶಿ ತಳಿ

ಪಾಲಿಕೆಗೆ ತಲೆನೋವಾದ ಪ್ಲೆಕೋ ಮೀನು!

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದ ಇಸ್ರೋ ಲೇಔಟ್ ದೇವರಕೆರೆ ಪಾರ್ಕ್ ಸಮೀಪದ ಕೆರೆಯಲ್ಲಿ ಅನಾಮಧೇಯರು ವಿದೇಶಿ ತಳಿ ಹಾಗೂ ಜೀವ ವೈವಿಧ್ಯಕ್ಕೆ ಹಾನಿಕಾರಕ ಎನ್ನಲಾದ ಪ್ಲೆಕೋ ಮೀನನ್ನು ಬಿಟ್ಟರುವುದು ಪಾಲಿಕೆ ಅಧಿಕಾರಿಗಳ ತಲೆನೋವಿಗೆ ಕಾರಣವಾಗಿದೆ.

ದೇವರಕೆರೆ ಪಾರ್ಕ್ ಸಮೀಪದ ಕೆರೆಯನ್ನು ಪಾಲಿಕೆಯ ಕೆರೆ ವಿಭಾಗದ ಅಧಿಕಾರಿಗಳು ಪುನರುಜ್ಜೀವನ ಮಾಡುವ ಉದ್ದೇಶದಿಂದ ಹೂಳು ಎತ್ತುತ್ತಿದ್ದರು. ಈ ವೇಳೆ ಪ್ಲೆಕೋ ಮೀನು ಪತ್ತೆ ಆಗಿದ್ದು, ಸ್ಥಳೀಯರು ತಿಳುವಳಿಕೆ ಕೊರತೆಯಿಂದ ಈ ಮೀನುಗಳನ್ನು ರಕ್ಷಿಸಲು ಟ್ಯಾಂಕರ್‌ಗಳ ಮೂಲಕ ನೀರು ಬಿಟ್ಟು ಬದುಕಿಸುವ ಯತ್ನ ಮಾಡಿದ್ದಾರೆ. ಈ ಬಗ್ಗೆ ಮಾಹಿತಿ ತಿಳಿದ ಪಾಲಿಕೆಯ ಅಧಿಕಾರಿಗಳು ಪ್ಲೆಕೋ ಮೀನುಗಳನ್ನು ತೆರವು ಮಾಡುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಪ್ರಾತಿನಿಧಿಕ ಚಿತ್ರ



ಪ್ಲೆಕೋ ಮೀನು ಹೆಚ್ಚಾಗಿ ದಕ್ಷಿಣ ಅಮೆರಿಕದಲ್ಲಿ ಕಂಡುಬರುತ್ತವೆ.

ಇದು ಸಹ ಕ್ಯಾಟ್‌ಫಿಶ್ ತಳಿ ಮಾದರಿಯಾಗಿದ್ದು, ಇದರಿಂದ ಉಳಿದ ಜಲಚರಗಳಿಗೆ ಹಾನಿಯಾಗುತ್ತದೆ. ಈ ಮೀನುಗಳಿಂದ ಸ್ಥಳೀಯ ಜೀವ ವೈವಿಧ್ಯ ಹಾಳಾಗುತ್ತವೆ. ಈ ಮೀನು ಉಳಿದ ಜಲಚರಗಳಿಗೆ ಹಾನಿ ಮಾಡಿ ಸಾಯಿಸುತ್ತವೆ. ಇಲ್ಲವೇ ತಿನ್ನುತ್ತವೆ. ಹೀಗಾಗಿ, ಈ ರೀತಿಯ ಮೀನುಗಳ ಸಾಗಾಣಿಕೆ ಹಾಗೂ ಸಾಕುವುದಕ್ಕೆ ಕಡಿವಾಣ ಹಾಕಬೇಕು. ಕೆಣಕಾನೂನು ರೂಪಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕಿದೆ ಎನ್ನುತ್ತಾರೆ ಪರಿಸರವಾದಿ ಡಾ। ಕೃಷ್ಣಿಜ್ ಆರ್ಸ್.

ಪರಿಸರ ತಜ್ಞ ವಿಜಯ್ ನಿಶಾಂತ್ ಅವರು, ಪ್ಲೆಕೋ ಮೀನುಗಳು ವಿದೇಶಿ ತಳಿಯಾಗಿದ್ದು, ಸ್ಥಳೀಯರ ತಿಳುವಳಿಕೆ ಕೊರತೆಯಿಂದ ಇವುಗಳನ್ನು ರಕ್ಷಿಸಲು ಮುಂದಾಗಿದ್ದಾರೆ. ಇದನ್ನು ಆಕ್ವೇರಿಯಂಗಳಲ್ಲಿ ಬಳಸುತ್ತಾರೆ. ಸ್ಥಳೀಯರು ಅಥವಾ ಬೇರೆ ಎಲ್ಲಿಂದಲೂ ಈ ಮೀನನ್ನು ಕೆರೆಗೆ ತಂದುಬಿಟ್ಟರುವ ಸಾಧ್ಯತೆ ಇದೆ. ಈ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಸಾರ್ವಜನಿಕರ ಮಾಹಿತಿ ಕೊರತೆಯಿಂದ ಸಾಮಾಜಿಕ ಜಾಲತಾಣದಲ್ಲಿ ದೇವರಕೆರೆಯಲ್ಲಿರುವ ಪ್ಲೆಕೋ ಮೀನುಗಳು ಒದ್ದಾಡುತ್ತಿರುವ ಫೋಟೋ ಹಾಗೂ ವಿಡಿಯೋ ವೈರಲ್ ಆಗಿದೆ.

05-02-2021
Kp Pg 04

ದಶಕದಲ್ಲೇ ಮೊದಲ ಬಾರಿಗೆ ಬಂದರು ಬಳಕೆ | ಶೇಕಡಾ 20 ರಷ್ಟು ಹೆಚ್ಚಳ

ಡೀಪ್ ವಾಟರ್‌ಪೋರ್ಟ್‌ನಲ್ಲಿ ಅಕ್ಕಿ ರಫ್ತು

ಹೊಸದಿಲ್ಲಿ: ಜಾಗತಿಕ ಧಾನ್ಯ ಕೊರತೆ ಎದುರಾಗಿರುವ ನಡುವೆಯೇ ದೇಶ ಅಕ್ಕಿ ರಫ್ತು ಮತ್ತಷ್ಟು ಹೆಚ್ಚಿಸುತ್ತಿದ್ದು, ಆಂಧ್ರಪ್ರದೇಶದಿಂದ ದಶಕಗಳಲ್ಲೇ ಮೊದಲ ಬಾರಿಗೆ ಅಕ್ಕಿ ರಫ್ತಿಗಾಗಿ ಕಾಕಿನಾಡ ಬಂದರು (ಡೀಪ್‌ವಾಟರ್‌ಪೋರ್ಟ್) ಬಳಕೆ ಮಾಡಲಾಗುತ್ತಿದೆ.

ದೇಶದಿಂದ ಏದನೇ ಒಂದು ಭಾಗದ ಅಕ್ಕಿ ರಫ್ತನ್ನು ಹೆಚ್ಚಿಸಲು ಸರ್ಕಾರ ಆದೇಶ ಹೊರಡಿಸಿದ್ದು, ಭಾರತದ ಅತಿದೊಡ್ಡ ಅಕ್ಕಿ ನಿರ್ವಹಣಾ ಸೌಲಭ್ಯ ಹೊಂದಿರುವ ಕಾಕಿನಾಡ ಆಕರೇಂಜ್ ಬಂದರಿನಲ್ಲಿ ದಾಸ್ತಾನ ಹೆಚ್ಚಿಸಲೆ ಎಂದು ತಿಳಿದುಬಂದಿದೆ.

ದಾಸ್ತಾನ ಹೆಚ್ಚಿರುವುದರಿಂದ ರಫ್ತು ಸಮಯ ಹೆಚ್ಚಿಗೆಯಾಗುತ್ತಿದ್ದು, ಸಾಮಾನ್ಯ ಕಾಯುವ ಸಮಯಕ್ಕಿಂತ 4 ವಾರ ಹೆಚ್ಚಿಗೆ ಕಾಯುವ ಪರಿಸ್ಥಿತಿ ಉದ್ಭವಿಸಿದೆ. ಈ ಹಿನ್ನೆಲೆ ಆಕರೇಂಜ್ ಬಂದರಿನಲ್ಲಿ ಹೆಚ್ಚಿಗೆ ಸಾಮರ್ಥ್ಯ ಸೃಷ್ಟಿಸುವವರೆಗೂ ಡೀಪ್‌ವಾಟರ್‌ಪೋರ್ಟ್ ಬಳಕೆಗೆ ಅವಕಾಶ ನೀಡಲಾಗಿದೆ.

ಡೀಪ್ ವಾಟರ್ ಪೋರ್ಟ್ ಬಳಕೆಗೆ ಅನುವು ಮಾಡಿಕೊಟ್ಟಿರುವುದರಿಂದ ರಾಗಗೆದಾರರ ಹೆಚ್ಚಿಸುವ, ರಫ್ತು ಸಂಬಂಧಿತಗೊಳ್ಳುವ ಸಮಸ್ಯೆಗಳು ಬಗೆಹರಿಯಲಿದೆ ಎಂದು ಭಾರತದ ಅಕ್ಕಿ ರಫ್ತುದಾರ ಸಂಘದ ಅಧ್ಯಕ್ಷ ಜ.ವಿ.ಕೃಷ್ಣರಾವ್ ಹೇಳಿದ್ದಾರೆ.

ಅಕ್ಕಿ ಉತ್ಪಾದನಾ ರಾಷ್ಟ್ರಗಳಲ್ಲೇ ಕೊರತೆ:

ಆಲ್ಪದ, ಏಪ್ಪದ ಇತರೆ ಅಕ್ಕಿ ಉತ್ಪಾದನಾ ರಾಷ್ಟ್ರಗಳಲ್ಲಿ ಉತ್ಪಾದನಾ ಕೊರತೆ ಉಂಟಾಗಿರುವುದರಿಂದ ಅಕ್ಕಿ ಬೆಲೆಯಲ್ಲಿ ಏರಿಕೆ ಕಂಡುಬಂದಿದ್ದು, ಫಿಲ್ಯಾಂಡ್ ಮತ್ತು ವಿಯೆಟ್ನಾಂ ನಂತಹ ದೊಡ್ಡ ಅಕ್ಕಿ ಪೂರೈಕೆ ರಾಷ್ಟ್ರಗಳು ಕೂಡ ಈ ಬಾರಿ ಅನಿಶ್ಚಿತ ಮಳೆ ಬರಗಾಲದಿಂದ ಉತ್ಪಾದನೆ ಮೇಟಿಕುಗೊಳಿಸಿದೆ.

ಇದರಿಂದಾಗಿ ಜಾಗತಿಕ ಧಾನ್ಯಗಳ ಕೊರತೆ ಹೆಚ್ಚುತ್ತಿರುವುದರ ಜತೆಗೆ ಬೆಲೆ ಏರಿಕೆಯು ತಲೆದೂರುದ್ದು, ಪ್ರಮುಖ ಅಕ್ಕಿ ಉತ್ಪಾದನಾ ದೇಶಗಳು ರಫ್ತು ಹೆಚ್ಚಿಸುವ ಮೂಲಕ ಬೆಲೆ ಏರಿಕೆ ಸರಿದೂಗಿಸಬಹುದೆಂದು ತಜ್ಞರು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.



ಆಂಧ್ರ ಪ್ರದೇಶದ ರಫ್ತು ದ್ವಿಗುಣ

ಡೀಪ್ ವಾಟರ್‌ಪೋರ್ಟ್ ಬಳಕೆಯಿಂದಾಗಿ 6 ಲಕ್ಷ 50 ಸಾವಿರ ಟನ್ ಅಕ್ಕಿ ರಫ್ತುನೊಂದಿಗೆ ಆಂಧ್ರ, ತನ್ನ ತಿಂಗಳು ರಫ್ತು ಸಾಮರ್ಥ್ಯವನ್ನು ದ್ವಿಗುಣಗೊಳಿಸಿಕೊಳ್ಳಲಿದ್ದು, ಶೀಘ್ರದಲ್ಲೇ ಕಾಕಿನಾಡ ಬಂದರಿನಲ್ಲಿ ರಫ್ತು ಕಾರ್ಯಾಚರಣೆ ಆರಂಭಗೊಳ್ಳಲಿದೆ. ಇದರಿಂದಾಗಿ ಅಕ್ಕಿ ರಫ್ತು ಆದೇಶಗಳು ತ್ವರಿತಗೊಳ್ಳಲಿದೆ ಎಂದು ರಾವ್ ಹೇಳಿದ್ದಾರೆ.

ಈ ರಾಷ್ಟ್ರಗಳಿಗೆ ಅಕ್ಕಿ ರಫ್ತು

ಬಾಂಗ್ಲಾದೇಶ, ನೇಪಾಳ, ಬೆನಿನ್,ಸೆನೆಗಲ್ ರಾಷ್ಟ್ರಗಳಿಗೆ ಭಾರತ ಬಾಸುಮತಿ ಅಲ್ಲದ ಅಕ್ಕಿಗಳನ್ನು ರಫ್ತು ಮಾಡುತ್ತಿದ್ದು, ಇರಾನ್, ಇರಾಕ್ ಮತ್ತು ಸೌದಿ ಅರೇಬಿಯಾಗೆ ಬಾಸುಮತಿ ಅಕ್ಕಿಯನ್ನು ರಫ್ತು ಮಾಡುತ್ತದೆ.

05-02-2021
Hd Pg 05

ಬೇಳೆಕಾಳು ದುಬಾರಿ

ತೈಲ ಬೆಲೆ ಏರಿಕೆ। ರೈತರಿಗೆ ದೊರೆಯದ ಲಾಭ



ಸಂ.ಕ.ಸಮಾಚಾರ ಬೆಂಗಳೂರು

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಒಂದೇ ಸಮನೆ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದ್ದು ಬೇಳೆಕಾಳುಗಳ ದರ ದಿಢೀರ್ ಎಂದು ಮತ್ತಷ್ಟು ಹೆಚ್ಚಳವಾಗಿದೆ.

ಒಂದು ತಿಂಗಳ ಹಿಂದೆ ಇದ್ದ ದರಕ್ಕಿಂತ ಪ್ರಸ್ತುತ ಎಲ್ಲ ಬೇಳೆ ಕಾಳುಗಳ ಬೆಲೆಯಲ್ಲಿ ಪ್ರತಿ ಕೆ.ಜಿ.ಗೆ 10ರಿಂದ 15 ರೂ. ಹೆಚ್ಚಳವಾಗಿದೆ. ಪ್ರಸಕ್ತ ಹಂಗಾಮಿನಲ್ಲಿ ತೊಗರಿ ಸೇರಿದಂತೆ ಇನ್ನಿತರ ಬೇಳೆ ಕಾಳುಗಳು ಉತ್ತಮ ಇಳುವರಿ ಆಗಿದ್ದರೂ ದರ ದಿಢೀರ್ ಎಂದು ಏರಿಕೆಯಾಗಲು ತೈಲ ಬೆಲೆ ಹೆಚ್ಚಳವಾಗುತ್ತಿರುವುದೇ ಕಾರಣ.

ಸಗಟು ದರದಲ್ಲಿಯೇ 5ರಿಂದ 10 ರೂ. ಹೆಚ್ಚಳವಾಗುತ್ತಿದೆ. ಇದಕ್ಕೆ ಡೀಸೆಲ್ ಬೆಲೆ ಏರಿಕೆಯಾಗಿರುವುದರಿಂದ ಸರಕು ಸಾಗಣೆ ಲಾರಿ ಮಾಲೀಕರು ಸಾಗಣೆ ದರವನ್ನು ಹೆಚ್ಚಿಸಿರುವುದರಿಂದ ಈಗ ಬೇಳೆಕಾಳುಗಳ ದರವೂ ಹೆಚ್ಚುತ್ತಿದೆ. ಆದರೆ, ರೈತರಿಗೆ ಮಾತ್ರ ಇದರ ಲಾಭ ಸಿಗುತ್ತಿಲ್ಲ. ಗ್ರಾಹಕರಿಗೆ ಹೊರೆಯಾಗಿ ಪರಿಣಮಿಸಿದೆ. ಈ ಹಿಂದೆ ಪ್ರತಿ ಕೆ.ಜಿ.ಗೆ 70ರಿಂದ 80 ರೂ. ಇದ್ದ ದರ ಒಮ್ಮೆಲೆ 100 ರೂ. ದಾಟಿದೆ.

ಬೇಳೆಕಾಳುಗಳ ದರ (ಸಗಟು ದರ ಪ್ರತಿ ಕೆಜಿಗೆ)	
ತೊಗರಿಬೇಳೆ	100 ರೂ.
ಉದ್ದಿನಬೇಳೆ	115
ಹೆಸರಬೇಳೆ	95
ಕಡಲೆಬೇಳೆ	60
ಹೆಸರಕಾಳು	105
ಕಡಲೆಕಾಳು	50
ಅಲಸಂದಿ	60
ಬಟಾಣಿ	120

05-02-2021
Sk Pg 02

ರೈತರಿಗೊಂದು ಸಿಹಿ ಸುದ್ದಿ ಹಾಲಿನ ದರ 2ರು. ಹೆಚ್ಚಳ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆ ವ್ಯಾಪ್ತಿಯ ರೈತರಿಂದ ಖರೀದಿಸುವ ಪ್ರತಿ ಲೀಟರ್ ಹಾಲಿಗೆ ಹೆಚ್ಚುವರಿ 2 ರು. ನೀಡಲು ಬೆಂಗಳೂರು ಸಹಕಾರ ಹಾಲು ಒಕ್ಕೂಟ (ಬಮೂಲ್) ನಿರ್ಧರಿಸಿದೆ.



5 ರು. ಹೆಚ್ಚಳಕ್ಕೆ ಪ್ರಸ್ತಾವನೆ ಸಲ್ಲಿಕೆ

ಪ್ರತಿ ಲೀಟರ್ ಹಾಲಿಗೆ 5 ರು. ಹೆಚ್ಚಿಸುವಂತೆ ಕೆಎಂಎಫ್‌ಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಲ್ಲದೆ, ಎಲ್ಲ ಒಕ್ಕೂಟಗಳು ಸಹ ಹಾಲಿನ ದರವನ್ನು ಹೆಚ್ಚಿಸಲು ಬೇಡಿಕೆ ಇಟ್ಟಿವೆ. ಈ ಬಗ್ಗೆ ಶೀಘ್ರದಲ್ಲೇ ಸರಕಾರ ನಿರ್ಧಾರ ತೆಗೆದುಕೊಳ್ಳುವ ವಿಶ್ವಾಸವಿದೆ. ಆಲ್ಲದೆ, ಸರಕಾರ ಕ್ಷೀರ ಯೋಜನೆಯಡಿ ರೈತರಿಗೆ 5 ರು. ಪ್ರೋತ್ಸಾಹ ಧನ ನೀಡುತ್ತಿದೆ. ಇದನ್ನು 6 ರು.ಗೆ ಹೆಚ್ಚಿಸಲು ಸರಕಾರಕ್ಕೆ ಮನವಿ ಮಾಡ ಲಾಗಿದೆ. ಹಿಂದಿನ ಸರಕಾರ ಪ್ರೋತ್ಸಾಹ ಧನವನ್ನು ಹೆಚ್ಚಿಸಿದ್ದರೂ ಕಾರಣಾಂತರಗಳಿಂದ ಹಣ ಬಿಡುಗಡೆ ಆಗಿರಲಿಲ್ಲ ಎಂದು ಬಮೂಲ್ ಮಾಜಿ ಅಧ್ಯಕ್ಷ ಆಂಜಿನಪ್ಪ ತಿಳಿಸಿದರು.

ಕರೋನಾ ಹಿನ್ನೆಲೆಯಲ್ಲಿ ರೈತರಿಂದ ಖರೀದಿಸುವ ಹಾಲಿನ ದರವನ್ನು ಕಡಿತಗೊಳಿಸಲಾಗಿತ್ತು. ಒಕ್ಕೂಟವು ಈಗ ಚೇತರಿಕೆ ಕಾಣುತ್ತಿರುವ ಹಿನ್ನೆಲೆಯಲ್ಲಿ ಶೇ.4.2 ಜಿಡ್ಡಿನಾಂಶ ಇರುವ ಹಾಲಿಗೆ 2 ರು. ಹೆಚ್ಚಿಸಿ, ಪ್ರತಿ ಲೀಟರ್‌ಗೆ 27,40 ರು. ನಂತೆ ಖರೀದಿಸಲಿದೆ. ಫೆ.6ರಿಂದ ಇದು ಜಾರಿಗೆ ಬರಲಿದ್ದು 1.50 ಲಕ್ಷ ರೈತರಿಗೆ ಪ್ರಯೋಜನ ಸಿಗಲಿದೆ. ಈ ಹಿಂದೆ 25,40 ರು. ನಂತೆ ಖರೀದಿಸಲಾಗುತ್ತಿತ್ತು.

ಬಮೂಲ್‌ಗೆ ಪ್ರತಿ ನಿತ್ಯ ಅಂದಾಜು 17.2 ಲಕ್ಷ ಲೀಟರ್ ಹಾಲು ಸರಬರಾಜು ಆಗುತ್ತಿದೆ. ಇದರಲ್ಲಿ 12 ಲಕ್ಷ ಲೀಟರ್ ಹಾಲನ್ನು ಪ್ಯಾಕಿಂಗ್ ರೂಪದಲ್ಲಿ ಪರಿವರ್ತಿಸಿ ಮಾರಾಟ ಮಾಡಲಾಗುತ್ತಿದೆ. 2 ಲಕ್ಷ ಲೀಟರ್ ಹಾಲನ್ನು ಬೆಣ್ಣೆ ಹಾಗೂ 3 ಲಕ್ಷ ಲೀಟರ್ ಹಾಲನ್ನು ಪೌಡರ್ ರೂಪದಲ್ಲಿ ಮಾರಾಟ ಮಾಡಲಾಗುತ್ತಿದೆ.

ಕರೋನಾ ಸಂದರ್ಭದಲ್ಲಿ 14 ಲಕ್ಷ ಲೀಟರ್ ಹಾಲು ಒಕ್ಕೂಟಕ್ಕೆ ಸರಬರಾಜು ಆಗುತ್ತಿತ್ತು. ಇದರಲ್ಲಿ 7 ಲಕ್ಷ ಲೀಟರ್ ಹಾಲು ಮಾರಾಟವಾಗಿ ಪೌಡರ್ ಹಾಗೂ ಬೆಣ್ಣೆ ರೂಪದಲ್ಲಿ ಪರಿವರ್ತಿಸಿದ್ದರೂ ನಿತ್ಯ 2 ಲಕ್ಷ ಲೀಟರ್ ಹಾಲು ಉಳಿಕೆ ಆಗುತ್ತಿತ್ತು. ಇದರಿಂದ ಪ್ರತಿ ನಿತ್ಯ 60 ಲಕ್ಷ ರು. ನಷ್ಟ ಆಗುತ್ತಿತ್ತು. ಲಾಕ್‌ಡೌನ್ ತೆರವು ಬಳಿಕ ಒಕ್ಕೂಟ ನಿಧಾನಗತಿಯಲ್ಲಿ ಚೇತರಿಕೆಯತ್ತ ಸಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಬಮೂಲ್ ಅಧ್ಯಕ್ಷ ನರಸಿಂಹ ಮೂರ್ತಿ ತಿಳಿಸಿದರು.

05-02-2021
Vsv Pg 03

"A GREATEFUL HEART IS A MAGNET FOR MIRACLES"

UASB LIBRARY
Newspaper Clippings
Pg .2 Friday 05-02-2021 Jai Kisan



Four reasons to use mustard in your food

1 Mustard seeds are a rich source of minerals such as calcium, magnesium, phosphorus and potassium, all of which are essential for a healthy body.

2 Mustard contains folate which is needed for preventing neural tube defects in babies during pregnancy.

3 Mustard is a good source of fibre, something that's essential for a healthy bowel.

4 Mustard is also rich in vitamin A that keeps the eyes healthy, vitamin K that gives one bone strength, and vitamin C that aids in absorption of iron.



PIC: GETTY IMAGES

– Daily Mirror

05-02-2021
Time of Ind Pg 16

ಹೊಸ ಅಡಕೆ ಕೆ.ಜಿಗೆ ₹400

■ ಆರ್.ಸಿ.ಭಟ್ ಮಂಗಳೂರು

ravichandra.balekkale@timesgroup.com

ಕರಾವಳಿ ಚಾಲಿ ಅಡಕೆ ಹೊಸ ಬೆಳೆ ಗುರುವಾರ ಮಾರುಕಟ್ಟೆಯಲ್ಲಿ ಕೆ.ಜಿಗೆ 400 ರೂ.ಗೆ ಖರೀದಿಯಾಗುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದೆ.

ಉತ್ತರ ಭಾರತದಿಂದ ಅಡಕೆಗೆ ಭಾರಿ ಬೇಡಿಕೆ ಬಂದಿರುವುದರಿಂದ ದಿನೇ ದಿನೆ ಅಡಕೆ ಧಾರಣೆ ಏರಿಕೆ ಕಾಣುತ್ತಿದ್ದು, ಬೆಳೆಗಾರರಲ್ಲಿ ಮತ್ತೆ ಮಂದಹಾಸ ಮೂಡಿಸಿದೆ. ಇದೇ ವೇಳೆ ಹಳೆ ಅಡಕೆ ಧಾರಣೆ 460 ರೂ.ಗೆ ಖರೀದಿಯಾಗಿದೆ.

ಕಳೆದ ಹತ್ತು ದಿನಗಳಿಂದ ಧಾರಣೆಯಲ್ಲಿ ದಿಢೀರ್ ಏರಿಕೆ ಕಂಡುಬಂದಿದ್ದು, ಇನ್ನಷ್ಟು ಏರಿಕೆಯ ಮುನ್ಸೂಚನೆ ನೀಡಿದೆ. ಕಳೆದ ತಿಂಗಳು ಮಳೆ ಬಂದು ಅಡಕೆಗೆ ಸ್ವಲ್ಪ ಪ್ರಮಾಣದ ಸಮಸ್ಯೆಯಾಗಿರುವ ಕಾರಣ ಹೆಚ್ಚಿನ ಬೆಳೆಗಾರರು ಹೊಸ ಅಡಕೆ ಮಾರಾಟಕ್ಕೆ ನಿರ್ಧರಿಸಿದ್ದು, ಇದೇ ಅವಧಿಯಲ್ಲಿ ಉತ್ತಮ ಬೆಲೆ ಬಂದಿರುವುದರಿಂದ ಬೆಳೆಗಾರರು ಖುಷ್ ಆಗಿದ್ದಾರೆ.

ಜನವರಿ 4ರಂದು ಹೊಸ ಅಡಕೆಗೆ 340 ರೂ. ಹಾಗೂ ಹಳೆ ಅಡಕೆಗೆ 410 ರೂ. ಧಾರಣೆ ಇತ್ತು. ಒಂದೇ ತಿಂಗಳ ಅವಧಿಯಲ್ಲಿ ಹೊಸ ಹಾಗೂ ಹಳೆ ಅಡಕೆಗೆ ಬರೋಬ್ಬರಿ 60 ರೂ. ದಾಖಲೆಯ ಏರಿಕೆ ಕಂಡಿದೆ. ಒಂದೇ ತಿಂಗಳ ಅವಧಿಯಲ್ಲಿ ಇಷ್ಟೊಂದು ಧಾರಣೆ ಏರಿಕೆ ಕಂಡಿರುವುದು ಕೂಡ ಒಂದು ದಾಖಲೆಯೇ.

ಸಹಕಾರಿ ಸಂಸ್ಥೆ ಕ್ಯಾಂಪ್ಕೊ ಹಾಗೂ ಖಾಸಗಿ ವಲಯದಲ್ಲಿ ಅಡಕೆ ಖರೀದಿಗೆ



■ ಕರಾವಳಿಯ ಅಡಕೆಗೆ ಬಂತು ಬೆಲೆ

■ ಇತ್ತೀಚೆಗೆ ಏರುಗತಿಯಲ್ಲಿ ಧಾರಣೆ

ಪೈಪೋಟಿ ಆರಂಭವಾಗಿದ್ದು, ಇದು ಕೂಡ ಧಾರಣೆ ಏರಿಕೆಗೆ ಕಾರಣವಾಗಿದೆ. ಖಾಸಗಿ ವಲಯದಿಂದ ಮನೆ ಮನೆ ಖರೀದಿ ನಡೆಯುತ್ತಿದ್ದು, ಇದೇ ಮಾದರಿಯ ಖರೀದಿ ವ್ಯವಸ್ಥೆಯನ್ನು ಸಹಕಾರಿ ಸಂಸ್ಥೆ ಕ್ಯಾಂಪ್ಕೊ ಕೂಡ ಪರಿಚಯಿಸಿ ಅಡಕೆ ಖರೀದಿ ನಡೆಸುತ್ತಿದೆ. ಇದರಿಂದ ಬೆಳೆಗಾರನಿಗೆ ಸಾಗಾಟ ಖರ್ಚು ಇಲ್ಲದೆ ವ್ಯವಹಾರ ನಡೆಸಲು ಸಾಧ್ಯವಾಗುತ್ತಿದೆ.

ಲಾಕ್‌ಡೌನ್ ತೆರವಾದ ಸಂದರ್ಭ ಹೊಸ ಅಡಕೆಗೆ ಕೆಜಿಗೆ 250 ರೂ. ಹಾಗೂ ಹಳೆ ಅಡಕೆಗೆ 290 ರೂ.ಗೆ ಖರೀದಿಯಾಗಿತ್ತು. ಈಗ 9 ತಿಂಗಳ ಅವಧಿಯಲ್ಲಿ ಹೊಸ ಅಡಕೆಗೆ 150 ರೂ. ಹಾಗೂ ಹಳೆ ಅಡಕೆಗೆ 170 ರೂ. ಏರಿಕೆ ಕಂಡು ಸಾರ್ವಕಾಲಿಕ ದಾಖಲೆಯ ಬೆಲೆ ಬಂದಿದೆ.

05-02-2021
Vk Pg 14

WTO asked to revisit agriculture pact before talking in support of Indian farmers

A group of former IFS officers has called upon the WTO to revisit the agreement on agriculture, stating that it's biased in favour of the developed world. As much as other WTO Members were not even consulted, they said, the WTO agreement is characterised by democratic deficit and based on commercial realpolitik. "Obviously, you cannot have your cake and eat it too. The balance between market forces, food security and famers' welfare is a delicate one"

05-02-2021
Ind Exp Pg 10